ತಿಳಿಸಿರುವ ಷರತ್ತುಗಳಂತೆ ವಿವಿಧ ಸಂಬಂಧಿತ ಇಲಾಖೆಗಳಿಂದ ಅನುಮೋದನೆಗಳನ್ನು ಪಡೆದು ಅಂತಿಮವಾಗಿ ಕ್ರೆಡಲ್ ಸಂಸ್ಥೆಗೆ ತಾಂತ್ರಿಕ ಅನುಮೋದನೆಗಾಗಿ ಕೋರುವರು. ಈ ಯೋಜನೆಗಳ ತಾಂತ್ರಿಕ ಅಂಶವನ್ನು ಕೂಲಂಕಷವಾಗಿ ಪರಿಶೀಲಿಸಿ ತಾಂತ್ರಿಕ ಅನುಮೋದನೆಯನ್ನು ನೀಡುವರು.

ಊ) ಈ ಯೋಜನೆಯ ಸಾಮರ್ಥ್ಯದ ಹೆಚ್ಚಳಕ್ಕೆ ಹೆಚ್ಚಿನ ನೀರಿನ ಹರಿವು ಅಭ್ಯವಿರುವುದನ್ನು ಸೂಕ್ತವಾಗಿ ಪರಿಶೀಲಿಸಿ ಸರ್ಕಾರವು ಅನುಮತಿ ನೀಡುತ್ತದೆ. ಅದೂ ಅಲ್ಲದೇ ಇದಕ್ಕೆ ನೀರಾವರಿ ಇಲಾಖೆಯ ಅನುಮತಿಯನ್ನು ಸಹ ಅಭಿವೃದ್ದಿದಾರರು ಪಡೆಯಬೇಕಾಗಿರುತ್ತದೆ.

ಋ) ಶಿಂಷಾ ಕಿರುಜಲ ವಿದ್ಯುತ್ ಯೋಜನೆಯ ಸಾಮರ್ಥ್ಯ ವಿಸ್ತರಣೆಗೆ ಹೆಚ್ಚುವರಿ ಭೂಮಿಯ ಅವಶ್ಯಕತೆ ಇರದಿರುವುದರಿಂದ ಹೆಚ್ಚಿನ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿರುವುದಿಲ್ಲ. ಈ ಯೋಜನೆಯು ಈ ಪ್ರಶ್ನೆಯಲ್ಲಿ ತಿಳಿಸಿರುವಂತೆ ಬ್ಲಫ್ ಜಲಾಶದ ವ್ಯಾಪ್ತಿಯಲ್ಲಿ ಇರುವುದಿಲ್ಲದ ಕಾರಣ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಋ) ಉದ್ಭವಿಸುವುದಿಲ್ಲ.

5233(5799) ಶ್ರೀ ಅಪ್ಪಸಾಹೇಬ್ (ಅಪ್ಪ) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅಲ್ಪಸಂಖ್ಯಾತರ ಅಭಿವೃದ್ದಿಗಾಗಿ ಅಲ್ಪಸಂಖ್ಯಾತರ ಅಭಿವೃದ್ದಿ ನಿಗಮದ ವತಿಯಿಂದ ಹಮ್ಮಿಕೊಳ್ಳಲಾಗಿರುವ ಕಾರ್ಯಕ್ರಮಗಳು ಯಾವುವು ;

ಆ) ವಿಜಾಪುರ ವಿಧಾನ ಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಿಂದ ಮಂಜೂರಾದ ಮತ್ತು ಬಿಡುಗಡೆಯಾದ ಹಣವೆಷ್ಟು;

ಇ) ಈ ಹಣದಿಂದ ಕೈಗೊಂಡಿರುವ ಕಾರ್ಯಕ್ರಮಗಳು ಯಾವುವು ?

ಶ್ರೀ ಜಬ್ಬರ್‌ಖಾನ್ ಹೊನ್ನಾಳಿ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಸಚಿವರು) :

ಅ) ಅಲ್ಪಸಂಖ್ಯಾತರ ಅಭಿವೃದ್ದಿ ನಿಗಮದಿಂದ ಅಲ್ಪ ಸಂಖ್ಯಾತರ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ಸ್ವಾವಲಂಬನ ಮಾರ್ಜಿನ ಹಣ ಸಾಲದ ಯೋಜನೆ.
2. ಸಹಾಯಧನ ಯೋಜನೆ.
3. ನೇರ ಸಾಲದ ಯೋಜನೆ.
4. ತರಬೇತಿ ಕಾರ್ಯಕ್ರಮಗಳು.
5. ಗಂಗಾ ಕಲ್ಯಾಣ ಯೋಜನೆ.

ಅ) ಮತ್ತು ಇ) ಕೈಗೊಂಡ ಕಾರ್ಯಕ್ರಮಗಳು, ಮಂಜೂರಾದ ಹಾಗೂ ಬಿಡುಗಡೆ ಮಾಡಿದ ಹಣದ ವಿವರ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

ಸ್ವಾವಲಂಬಿನ	2002-03	2003-04	2004-05
ಮಾರ್ಜಿನ ಹಣ ಸಾಲದ ಯೋಜನೆ	19.25	14.61	16.69
ಸಹಾಯಧನ ಯೋಜನೆ	9.25	6.30	5.85
ನೇರ ಸಾಲದ ಯೋಜನೆ	28.79	49.24	30.60
ತರಬೇತಿ ಕಾರ್ಯಕ್ರಮಗಳು	1.05	–	–
ಗಂಗಾ ಕಲ್ಯಾಣ ಯೋಜನೆ	30.50	80.60	35.65

5234(5800) ಶ್ರೀ ಅಪ್ಪಾಸಾಹೇಬ್ (ಅಪ್ಪು)ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಯಾವ ಯಾವ ಪ್ರವಾಸಿ ಸ್ಥಳಗಳನ್ನು ವಿಶ್ವಪರಂಪರೆಯ ಪಟ್ಟಿಗೆ ಸೇರಿಸಲಾಗಿದೆ;

ಆ) ವಿಶ್ವ ವಿಖ್ಯಾತ ಗೋಗುಮ್ಮಟವನ್ನು ಹೊಂದಿರುವ ವಿಜಾಪುರವನ್ನು ವಿಶ್ವಪರಂಪರೆಯ ಪಟ್ಟಿಗೆ ಸೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಾದರೆ ಸರ್ಕಾರವು ಯಾವ ಯಾವ ಪ್ರವಾಸಿ ಸ್ಥಳಗಳನ್ನು ವಿಶ್ವಪರಂಪರೆಯ ಪಟ್ಟಿಗೆ (ಯುನೆಸ್ಕೋ) ಸೇರಿಸಲು ಸಿದ್ದತೆ ನಡೆಸಿದೆ; ಅವು ಯಾವುವು;

ಈ) ಗೋಲಾಗುಮ್ಮಟವನ್ನು ವಿಶ್ವ ಪರಂಪರೆಯ ಪಟಿಗೆ ಯಾವಾಗ ಸೇರಿಸಲಾಗುವುದು;

ಉ) ಗೋಳಗುಮ್ಮಟವನ್ನು ವೀಕ್ಷಿಸಲು ಬರುವ ದೇಶೀಯ ಹಾಗೂ ವಿದೇಶಿ ಪ್ರವಾಸಿಗರಿಗಾಗಿ ಸರ್ಕಾರವು ಯಾವ ಪ್ರವಾಸಿಗರಿಗಾಗಿ ಸರ್ಕಾರವು ಯಾವ ಯಾವ ಮೂಲಭೂತ ಸೌಲಭ್ಯಗಳನ್ನು ಒದಗಿಸಿದೆ? (ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) 1. ಪಟ್ಟದಕಲ್ಲಿನಲ್ಲಿರುವ ಸ್ಮಾರಕಗಳ ಸಮೂಹ ಬಾಗಲಕೋಟೆ ಜಿಲ್ಲೆ

2. ಹಂಪಿಯಲ್ಲಿ ಸ್ಮಾರಕಗಳ ಸಮೂಹ, ಬಳ್ಳಾರಿ ಜಿಲ್ಲೆ

ಆ) ಹೌದು. ಭಾರತೀಯ ಪುರಾತತ್ವ ಸರ್ವೇಕ್ಷಣೆ, ಧಾರವಾಡ ವಲಯವು ಇತ್ತೀಚೆಗೆ ಬಿಜಾಪುರ ನಗರದಲ್ಲಿರುವ ವಿಶ್ವವಿಖ್ಯಾತ ಗೋಳ-ಗುಂಬಜನ್ನು ವಿಶ್ವಪರಂಪರೆ ಪಟ್ಟಿಯಲ್ಲಿ ಸೇರ್ಪಡೆ ಮಾಡಲು ಪ್ರಸ್ತಾಪಿಸಿರುತ್ತಾರೆ.